O/C

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೊರಮಾವು ಉಪ ವಿಭಾಗ, ಮಹದೇವಪುರ ವಲಯ, ಬೆಂಗಳೂರು – 560 113.

ಸಂಖ್ಯೆ:ಸಕಾಅ/ಹೊ.ಉ.ವಿ/ವಿ.ಆರ್/ /2021-22 ದಿನಾಂಕ:- 8/12/2021

## "ಸಭಾ ಸೂಚನಾ ಪತ್ರ"

**ವಿಷಯ:-** ವಾರ್ಡ್ ನಂ-51 ರ ವಿಜಿನಾಪುರ ವಾರ್ಡ್ ಕಮಿಟಿ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:- 10/12/2021 ಬೆಳಗ್ಗೆ 11.30 ಗಂಟೆಗೆ ವಾರ್ಡ್ ಸಮಿತಿಯ ಸದಸ್ಯರುಗಳಿಗೆ ಸಭೆ ಕರೆದಿರುವ ಬಗ್ಗೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಜಿನಾಪುರ ವಾರ್ಡ್ ನಂ-51 ರ ಕಾರ್ಯದರ್ಶಿ ಮತ್ತು ಸಂಚಾಲಕರು ರವರ ಸಮ್ಮುಖದಲ್ಲಿ ವಾರ್ಡ್ ನಂ-51 ಕ್ಕೆ ಸಂಬಂಧಿಸಿದಂತೆ ವಾರ್ಡ್ ಸಮಿತಿಯ ಸದಸ್ಯರುಗಳಿಗೆ ವಿಜಿನಾಪುರ ವಾರ್ಡ್ ಕಛೇರಿಯಲ್ಲಿ ಸಭೆ ಕರೆಯಲಾಗಿದ್ದು, ತಾವುಗಳು ಮೇಲ್ಕಂಡ ದಿನಾಂಕದಂದು ತಪ್ಪದೇ ಸಭೆಗೆ ಹಾಜರಾಗಲು ಈ ಮೂಲಕ ತಮ್ಮಲ್ಲಿ ಕೋರಲಾಗಿದೆ.

**ವಿಶೇಷ ಸೂಚನೆ:-** Covid 19 ಇರುವುದರಿಂದ ಎಲ್ಲಾರು ಕಡ್ಡಾಯವಾಗಿ ಸ್ಯಾನಿಟೈಜರ್ ಬಳಸಿ, ಮಾಸ್ಕ್ ಧರಿಸಬೇಕು ಮತ್ತು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.

Office of the Police Inspector * K.R. Pura Traffic Police Station, Bangalore
SL No.
DATE 9/12/21

ಕಾರ್ಯದರ್ಶಿಗಳು ಮತ್ತು ಸಂಚಾಲಕರು ಹಾಗೂ
ಸಹಾಯಕ ಅಭಿಯಂತರರು ವಿಜಿನಾಪುರ ವಾರ್ಡ್
ಸಂಖ್ಯೆ-51.

ರವರಿಗೆ,

09/12/21

2-2ನೇ ...
... -16
ಸಂಖ್ಯೆ......
ದಿನಾಂಕ...9/12/21

ಸಂಖ್ಯೆ
ದಿನಾಂಕ 09/12/21

**ಪ್ರತಿಯನ್ನು:-**

1) ಮಾನ್ಯ ಜಂಟಿ ಆಯುಕ್ತರು ಮಹದೇವಪುರ ವಲಯರವರ ರವರ ಘನ ಮಾಹಿತಿಗಾಗಿ.
2) ಮಾನ್ಯ ಮುಖ್ಯ ಅಭಿಯಂತರರು ಮಹದೇವಪುರ ವಲಯರವರ ರವರ ಘನ ಮಾಹಿತಿಗಾಗಿ.
3) ಕಾರ್ಯಪಾಲಕ ಅಭಿಯಂತರರು ಕೆ.ಆರ್.ಪುರ ವಿಭಾಗರವರ ಘನ ಮಾಹಿತಿಗಾಗಿ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು ಹೊರಮಾವು ಉಪ ವಿಭಾಗ ರವರ ಘನ ಮಾಹಿತಿಗಾಗಿ.
5) ರಸ್ತೆ ಮೂಲಭೂತ ಸೌಕರ್ಯ ವಿಭಾಗ, ಕೇಂದ್ರ ಕಛೇರಿ ಅನೆಕ್ಷರ್ ಕಟ್ಟಡ, ರವರ ಘನ ಮಾಹಿತಿಗಾಗಿ.
6) ಬಿ.ಡಬ್ಲ್ಯು.ಎಸ್.ಎಸ್.ಬಿ, ಐ.ಟಿ.ಐ ಸರ್ಕಲ್, ದೂರವಾಣಿ ನಗರ ಅಂಚೆ, ಬೆಂಗಳೂರು-16 ರವರ ಮಾಹಿತಿಗಾಗಿ.
7) ರಾಜಕಾಲುವೆ ವಿಭಾಗ ಕಛೇರಿ, ನೃಪತುಂಗ ಸರ್ಕಲ್, ಬೆಂಗಳೂರು.
8) ಸಹಾಯಕ ಕಾರ್ಯಪಾಲಕ ಅಭಿಯಂತರರು, ಇ-10 ಉಪ-ವಿಭಾಗ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ರಾಮಮೂರ್ತಿನಗರ, ಬೆಂಗಳೂರು.
9) ಪಶುಸಂಗೋಪನೆ ಇಲಾಖೆ, ಕೃಷ್ಣರಾಜಪುರ ರವರ ಮಾಹಿತಿಗಾಗಿ.
10) ಕಛೇರಿ ಪ್ರತಿ.

RECEIVED
Office of the Executive Engineer (Electrical)
BBMP, Mahadevapura Zone, K.R. Puram,
Bangalore - 560 036.
No. 136 Date 09/12/2021

Scanned with Oken Scanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ, ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆ:ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ /2021-22 ದಿನಾಂಕ: 10.12.2021

## ದಿನಾಂಕ-10.12.2021 ರಂದು ನಡೆದಿರುವ ವಿಜಿನಾಪುರ ವಾರ್ಡ್ ಸಂಖ್ಯೆ-51 ರ ವಾರ್ಡ್ ಸಮಿತಿ ಸಭೆ ನಡುವಳಿಗಳು

| | ಸದಸ್ಯರ ಹೆಸರು ಮತ್ತು ಪದನಾಮ | ಸದಸ್ಯರ ಹಾಜರು/ಗೈರು ಹಾಜರು |
|---|---|---|
| 1 | ಶ್ರೀ.ಕೆ.ನಾಗಭೂಷಣ, ಸಹಾಯಕ ಅಭಿಯಂತರರು (ವಾರ್ಡ್ ನಂ.51) (ಕಾರ್ಯದರ್ಶಿ) | ಹಾಜರು |
| 2 | ಶ್ರೀ.ರಾಜಣ್ಣ (ಹಿ.ಆ.ಪ) ವಾರ್ಡ್ ನಂ.51 | ಹಾಜರು |
| 3 | ಶ್ರೀ.ಮಧು (ಕಿ.ಆ.ಪ) ವಾರ್ಡ್ ನಂ.51 | ಹಾಜರು |
| 4 | ಶ್ರೀ.ಮಂಜುನಾಥ ಬಡಿಗೇರ್ (ಕಂದಾಯ ಪರಿವೀಕ್ಷಕರು) | ಹಾಜರು |
| 5 | ಶ್ರೀ.ಮಹೇಂದ್ರ ಕುಮಾರ್ (ಸಲಹೆಗಾರರು, ಕಂದಾಯ ಇಲಾಖೆ ) | ಹಾಜರು |
| 6 | ಶ್ರೀ.ನಾಗರಾಜ್, ಕೆಲಸ ಪರಿವೀಕ್ಷಕರು ವಾರ್ಡ್ ನಂ.51 | ಹಾಜರು |
| 7 | ಶ್ರೀ.ರಂಗಯ್ಯ, ವಾಟರ್ ಇನ್ಸ್‌ಪೆಕ್ಟರ್ | ಹಾಜರು |
| 8 | ಶ್ರೀ.ಲಕ್ಷ್ಮಣ, ಮಾರ್ಷಲ್ | ಹಾಜರು |
| 9 | ಶ್ರೀ.ಡಿ.ವೈ.ಮೋಹನ್, ಪಶು ಸಂಗೋಪನಾ ಇಲಾಖೆ | ಹಾಜರು |
| 10 | ಶ್ರೀ.ಶಿವರಾಮನ್, ಬಿ.ಡಿ.ಎ ಲೇಔಟ್ | ಹಾಜರು |
| 11 | ಶ್ರೀ.ವೇಣುಗೋಪಾಲ್ ಜೆ.ಇ (ಬೆಸ್ಕಾಂ) | ಹಾಜರು |
| 12 | ಶ್ರೀ.ರಾಮಾಂಜಿನಪ್ಪ (ಎ.ಎಸ್.ಐ, ಟ್ರಾಫಿಕ್) | ಹಾಜರು |
| 13 | ಶ್ರೀಮತಿ.ಮೋನಿಕಾ ಮಾಲಿನಿ ಮನ್ನತ್ (ಎನ್.ಆರ್.ಕಾಲೋನಿ) | ಹಾಜರು |
| 14 | ಶ್ರೀ.ಜಾಕೀರ್, ಅಂಬೇಡ್ಕರ್‌ನಗರ | ಹಾಜರು |

ದಿನಾಂಕ-10.12.2021 ರಂದು ಪೂರ್ವಹ್ನ: 11.30 ಗಂಟೆ ಸಮಯದಲ್ಲಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯನದಾಗಿ ಮಾನ್ಯ ಅಧ್ಯಕ್ಷರು ಗೈರುಹಾಜರಾಗಿರುವ ಕಾರಣ ಶ್ರೀ.ಕೆ.ನಾಗಭೂಷಣ, ಸಹಾಯಕ ಅಭಿಯಂತರರು, ಕಾರ್ಯದರ್ಶಿ ರವರು ಸಭೆಯಲ್ಲಿ ಹಾಜರಿರುವ ಸದಸ್ಯರುಗಳು ಮತ್ತು ಅಧಿಕಾರಿ ವೃಂಧದವರಿಗೆಲ್ಲಾ ಸ್ವಾಗತಕೋರಿದರು. ತದನಂತರ ಈ ಕೆಳಕಂಡ ವಿಷಯಗಳ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಯಿತು.

1. ಶ್ರೀ.ಜಾಕೀರ್ ರವರು ಮಾತನಾಡುತ್ತಾ, ಆಕಳಪ್ಪ ಲೇಔಟ್, ಅಶೋಕ್ ಮನೆ ರಸ್ತೆಯಲ್ಲಿ ಚರಂಡಿಗಳಲ್ಲಿ ಹೂಳುತುಂಬಿದ್ದು, ನೀರು ಸರಾಗವಾಗಿ ಹರಿಯದೇ ಇರುವುದರಿಂದ ಇಲ್ಲಿನ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದರಿಂದ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ.

   **ಕ್ರಮ:-** ಸಹಾಯಕ ಅಭಿಯಂತರರು, ವಿಜಿನಾಪುರ ರವರು ಇದರ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.

ಮು.ತಿ.ನೋ

Scanned with Oken Scanner

2. ಶ್ರೀಮತಿ.ಮೋನಿಕಾ ಮಾಲಿನಿ ಮನ್ನತ್ (ಎನ್.ಆರ್.ಕಾಲೋನಿ) ರವರು ಮಾತನಾಡಿ ಎನ್.ಆರ್ ಬಡಾವಣೆಯ ಅಡ್ಡರಸ್ತೆಗಳಲ್ಲಿ ಚರಂಡಿಯಲ್ಲಿ ಹೂಳು ತೆಗೆಯಬೇಕೆಂದು ಕೋರಿದ್ದು, ಹಾಗೂ ರಸ್ತೆಯಲ್ಲಿ ಅಲ್ಲಲ್ಲಿ ಬಿದ್ದಿರುವ ಡೆಬ್ರಿಸ್‌ನ್ನು ತೆಗೆಯಬೇಕೆಂದು ಹಾಗೂ ಕೆಂಪೇಗೌಡ ಅಂಡರ್‌ಪಾಸ್ ಹತ್ತಿರ ಮರದ ರಂಭೆಗಳಿದ್ದು, ಸಂಚಾರಕ್ಕೆ ತೊಂದರೆಯಾಗುತ್ತಿರುವುದರಿಂದ ಇದರ ಬಗ್ಗೆ ಕ್ರಮಕೈಗೊಳ್ಳಲು ಕೋರಿರುತ್ತಾರೆ.

**ಕ್ರಮ:-** ಸಹಾಯಕ ಅಭಿಯಂತರರು, ವಿಜಿನಾಪುರ ರವರು ಇದರ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ, ಮತ್ತು ಮರದ ರಂಬೆಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಇಲಾಖೆರವರಿಗೆ ಸೂಚಿಸುವುದಾಗಿ ಸಭೆಯಲ್ಲಿ ತಿಳಿಸಿದರು.

3. ಸಾರ್ವಜನಿಕರು ಮಾತನಾಡಿ ವಿಜಿನಾಪುರ ವಾರ್ಡ್ ವ್ಯಾಪ್ತಿಯ ಅಂಬೇಡ್ಕರ್‌ನಗರ, ಕೊತ್ತೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಸದ ಸಮಸ್ಯೆ ಹೆಚ್ಚಾಗುತ್ತಿರುವುದರಿಂದ ಸರಿಯಾದ ಸಮಯಕ್ಕೆ ಕಸ ವಿಲೇವಾರಿ ಮಾಡದೆಯಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ಇದರ ಬಗ್ಗೆ ತುರ್ತು ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ.

**ಕ್ರಮ:-** ಸಭೆಯಲ್ಲಿ ಹಾಜರಿದ್ದ, ಕಿರಿಯ ಆರೋಗ್ಯ ನಿರೀಕ್ಷಕರು ವಿಜಿನಾಪುರ ರವರು ಇದರ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.

4. ಶ್ರೀ.ಶಿವರಾಮನ್ ರವರು ಮಾತನಾಡಿ ಬಿಡಿಎ ಲೇಔಟ್ ರಸ್ತೆಗಳಲ್ಲಿ ಸರಕು ಸಾಗಾಣಿಕೆ ವಾಹನಗಳನ್ನು ರಸ್ತೆಗಳಲ್ಲಿ ನಿಲ್ಲಿಸಿರುತ್ತಾರೆ. ಇದರಿಂದ ಸಾರ್ವಜನಿಕರಿಗೆ ವಾಹನಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ. ಇದರ ಬಗ್ಗೆ ತುರ್ತು ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ.

**ಕ್ರಮ:-** ಸಭೆಯಲ್ಲಿ ಹಾಜರಿದ್ದ, ಟ್ರಾಫಿಕ್ ಪೋಲೀಸ್ ರವರಿಗೆ ಇದರ ಬಗ್ಗೆ ಅಗತ್ಯ ಕ್ರಮವಹಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಕಾರ್ಯದರ್ಶಿ ರವರು ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯ ಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

Kmagah Hay

**ವಾರ್ಡ್ ಸಮಿತಿ ಕಾರ್ಯದರ್ಶಿಗಳು,**
**ವಾರ್ಡ್ ನಂ.51, ವಿಜಿನಾಪುರ**

Scanned with Oken Scanner